# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 11 (20) |
| ಸದಸ್ಯರ ಹೆಸರು | : | ಶ್ರೀ ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11.08.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ ಎರಡು ವರ್ಷಗಳಲ್ಲಿ ರಾಜ್ಯದ್ಯಂತ ಹೊಸದಾಗಿ ಎಷ್ಟು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ:(ಜಿಲ್ಲಾವಾರು/ ತಾಲ್ಲೂಕುವಾರು ಮಾಹಿತಿ ಒದಗಿಸುವುದು)</td><td>2023-24 ಮತ್ತು 2024-25ನೇ ಶೈಕ್ಷಣಿಕವರ್ಷಗಳಲ್ಲಿ ಪ್ರಾರಂಭಿಸಲಾದ ಪದವಿ ಪೂರ್ವ ಕಾಲೇಜುಗಳವಿವರ :-<br><br>
<table>
<tr><th>ವರ್ಷ</th><th>ಸರ್ಕಾರಿ ಪದವಿ ಪೂರ್ವ ಕಾಲೇಜುಗಳು</th><th>ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ</th></tr>
<tr><td>2023-24</td><td>03</td><td>102</td></tr>
<tr><td>2024-25</td><td>77</td><td>157</td></tr>
<tr><td>ಒಟ್ಟು</td><td>80</td><td>259</td></tr>
</table>
(ಅನುಬಂಧ-01 ರನ್ನು ಲಗತ್ತಿಸಿದೆ)</td></tr>
<tr><td>ಆ</td><td>ಪದವಿ ಪೂರ್ವ ಕಾಲೇಜಗಳನ್ನು ಪ್ರಾರಂಭಿಸಲು ಇರುವ ಮಾನದಂಡಗಳು ಯಾವುವು:</td><td><u>ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ:-</u><br><br>1. ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಮಾನದಂಡಗಳನ್ನು ರೂಪಿಸಲಾಗಿದ್ದು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅಥವಾ ಪ್ರೌಢ ಶಾಲೆಗಳನ್ನು ಉನ್ನತೀಕರಿಸಿ, ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸಲು ಯಾವುದೇ ನಿಖರವಾದ ಮಾನದಂಡಗಳು ರಚನೆಯಾಗಿರುವುದಿಲ್ಲ.<br><br>2. ರಾಜ್ಯದಲ್ಲಿನ ಗ್ರಾಮಾಂತರ ಪ್ರದೇಶಗಳಲ್ಲಿನ ಶೈಕ್ಷಣಿಕ ವಾತಾವರಣವನ್ನು ಉತ್ತಮ ಪಡಿಸುವ ಉದ್ದೇಶದಿಂದ ಪ್ರತಿ 10-20 ಕೀಮಿಗಳಿಗೆ ಒಂದರಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಬಗ್ಗೆ ಪರಿಗಣಿಸಲಾಗುತ್ತಿದೆ.<br><br>3. ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅಥವಾ ಪ್ರೌಢ ಶಾಲೆಗಳನ್ನು ಉನ್ನತೀಕರಿಸಲು ಉದ್ದೇಶಿಸಿರುವ ಕೆಲವು ಸ್ಥಳಗಳಲ್ಲಿ ಫೀಡಿಂಗ್ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಹಾಗೂ ಪ್ರೌಢ ಶಾಲೆಗಳನ್ನು ಉನ್ನತೀಕರಿಸಲು ನಿರ್ಧರಿಸಿರುವ ಪ್ರೌಢಶಾಲೆಯಲ್ಲಿ ಮೂಲಭೂತ ಸೌಲಭ್ಯಗಳು ಇರುವುದನ್ನು ಪರಿಗಣಿಸಲಾಗುತ್ತಿದೆ.</td></tr>
</table>

4. ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಪ್ರದೇಶಗಳ ಜನಸಂಖ್ಯೆ ಮತ್ತು ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣವನ್ನು ಗಮನಿಸಿ ಸ್ಥಳೀಯ ಜನ ಪ್ರತಿನಿಧಿಗಳು ಮತ್ತು ಗಣ್ಯವ್ಯಕ್ತಿಗಳ ಕೋರಿಕೆ ಮೇರೆಗೆ ಬೇಡಿಕೆ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿದೆ.

ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಕೆಲವು ಸ್ಥಳಗಳಲ್ಲಿ ಈಗಾಗಲೇ ಖಾಸಗಿ ಪದವಿ ಪೂರ್ವ ಕಾಲೇಜುಗಳಿದ್ದರೂ ಸಹ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಉತ್ತೇಜನ ನೀಡುವ ಸಲುವಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗುತ್ತಿದೆ.

**<u>ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ:-</u>**

ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಆಡಳಿತ, ಶೈಕ್ಷಣಿಕ, ನೋಂದಣಿ ಹಾಗೂ ಸಹಾಯಾನುದಾನ ಇತ್ಯಾದಿ) ನಿಯಮ 2006 ರ ನಿಯಮ 4 ರಂತೆ ಈ ಕೆಳಕಂಡ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಆಧಾರದ ಮೇಲ ಮಂಜೂರಾತಿ ನೀಡಲಾಗುತ್ತದೆ.

1. ಸರ್ಕಾರದ ಆದೇಶ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ 08-03-2018ರಂತೆ ನಿಗದಿಪಡಿಸಿದ ಅಗತ್ಯ ನಿವೇಶನ.
2. ನಿಗದಿತ ಅಳತೆಯ ತರಗತಿ ಕೊಠಡಿಗಳು.
3. ನಿಗದಿತ ಅಳತೆಯ ಪ್ರಯೋಗಾಲಯಗಳು,
4. ಕ್ರೀಡಾ ಕೊಠಡಿ, ನಿರೀಕ್ಷಣಾ ಕೊಠಡಿ.
5. ಪ್ರಾಂಶುಪಾಲರ, ಉಪನ್ಯಾಸಕರ, ಕಚೇರಿ ಕೊಠಡಿ.
6. ಆಟದ ಮೈದಾನ,
7. ವ್ಯಾಜ್ಯ ಇಲ್ಲದ ದೃಢೀಕರಣ.
8. ಅಡಿಟ್ ವರದಿ.
9. ಕಟ್ಟಡ ಸುರಕ್ಷತೆ ದೃಢೀಕರಣ,
10. ಅಗ್ನಿ ಸುರಕ್ಷತೆ ಸಲಹಾ ಮತ್ತು ಸಮಾಪನಾ ಪ್ರಮಾಣ ಪತ್ರ.
11. ನಿಗದಿತ ಮೊತ್ತದ ಸಾಲ್ವೆನ್ಸಿ,
12. ನಿಗದಿತ ಮೊತ್ತದ ಸ್ಥಿರನಿಧಿಠೇವಣಿ,
13. ನೋಂದಣಿ ಶುಲ್ಕ.
14. ಮಳೆನೀರುಕೊಯ್ಲು ಅಳವಡಿಸಿದ ದೃಢೀಕರಣ.
15. ಕಟ್ಟಡದ ಕಂದಾಯ ಪಾವತಿ ವಿವರ.
16. ಅನುಮೋದಿತ ಕಟ್ಟಡದ ನಕಾಶೆ, ಕಟ್ಟಡದ ಸ್ವಾಧೀನ ಪತ್ರ.
17. ನಿವೇಶನದ ಭೂಪರಿವರ್ತನೆ.
18. ನೈರ್ಮಲ್ಯ ದೃಢೀಕರಣ.
19. ಸ್ವಂತ ನಿವೇಶನವಿಲ್ಲದಿದ್ದಲ್ಲಿ 30 ವರ್ಷಗಳ ಅವಧಿ ನಿವೇಶನದ ನೋಂದಾಯಿತ ಲೀಸ್‌ಡೀಡ್.

| | | |
|---|---|---|
| ಇ) | ದಾವಣಗೆರೆ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಪದವಿ ಪೂರ್ವ ಕಾಲೇಜುಗಳಿಲ್ಲದೇ ಮಕ್ಕಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ.<br><br>2024-25 ನೇ ಸಾಲಿನಲ್ಲಿ ಒಂದು ಖಾಸಗಿ ಪದವಿ ಪೂರ್ವ ಕಾಲೇಜು ಪ್ರಾರಂಭವಾಗಿರುತ್ತದೆ. ಹಾಗೂ ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ದಾವಣಗೆರೆ ನಗರದ ಎಸ್ ಎಸ್ ಎಂ ನಗರದ ಸರ್ಕಾರಿ ಶಾಲೆ ಸ್ಥಳಾಂತರಿಸಲು ಇಲಾಖೆಯ ಹಂತದಲ್ಲಿ ಪರಿಶೀಲಿಸಲಾಗುತ್ತಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| ಈ) | ಬಂದಿದ್ದಲ್ಲಿ, ಸದರಿ ಮಕ್ಕಳ ವಿದ್ಯಾಭ್ಯಾಸಕ್ಕೆ ಆಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತದೆ:(ಸಂಪೂರ್ಣ ಮಾಹಿತಿ ಒದಗಿಸುವುದು) | |
| ಉ) | ದಾವಣಗೆರೆ ಜಿಲ್ಲೆಯ ದಕ್ಷಿಣ ಭಾಗದಲ್ಲಿರುವ ಪದವಿ ಪೂರ್ವ ಕಾಲೇಜುಗಳನ್ನು ಉನ್ನತೀಕರಿಸಿ ಮೇಲ್ದರ್ಜೆಗೇರಿಸಲು ಸರ್ಕಾರ ಚಿಂತಿಸುವುದೇ? | |

ಸಂಖ್ಯೆ:ಇಪಿ 217 ಎಸ್‌ಹೆಚ್‌ಹೆಚ್ 2025

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಅನುಬಂಧ 01 ಪ್ರಶ್ನೆ ಸಂಖ್ಯೆ:- 11(20) | | | | | | |
|---|---|---|---|---|---|---|
| ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಪ್ರಶ್ನೆಗೆ **ಅನುಬಂಧ 01**. | | | | | | |
| ಕ್ರ.ಸ | ಜಿಲ್ಲೆಯ ಹೆಸರು | ಜಿಲ್ಲಾ ಸಂಕೇತ | ಸರ್ಕಾರಿ ಪದವಿ ಪೂರ್ವ ಕಾಲೇಜು | | ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜು | |
| | | | 2023-24 | 2024-25 | 2023-24 | 2024-25 |
| 1 | ಬೆಂಗಳೂರು ಉತ್ತರ | AN | - | - | 10 | 19 |
| 2 | ಬೆಂಗಳೂರು ದಕ್ಷಿಣ | AS | - | - | 18 | 17 |
| 3 | ಬೆಂಗಳೂರು ಗ್ರಾಮಾಂತರ | BB | - | - | 04 | 05 |
| 4 | ರಾಮನಗರ | BR | - | 02 | 03 | 03 |
| 5 | ಬಳ್ಳಾರಿ | CC | - | 08 | 05 | 05 |
| 6 | ಚಿಕ್ಕೋಡಿ | DC | - | 02 | 06 | 10 |
| 7 | ಬೆಳಗಾವಿ | DD | - | 02 | 02 | 03 |
| 8 | ಬಾಗಲಕೋಟೆ | EB | - | 06 | 02 | 03 |
| 9 | ವಿಜಯಪುರ | EE | - | 05 | 11 | 11 |
| 10 | ಬೀದರ | FF | - | 04 | 04 | 05 |
| 11 | ದಾವಣಗೆರೆ | GD | - | - | 03 | 05 |
| 12 | ಚಿತ್ರದುರ್ಗ | GG | - | 02 | 0 | 02 |
| 13 | ಚಿಕ್ಕಮಗಳೂರು | HH | - | - | 01 | 02 |
| 14 | ಗದಗ | JG | - | 02 | 00 | 01 |
| 15 | ಹಾವೇರಿ | JH | - | - | 02 | 02 |
| 16 | ಧಾರವಾಡ | JJ | - | 02 | 03 | 07 |
| 17 | ಕಲಬುರಗಿ | KK | - | 07 | 06 | 07 |
| 18 | ಯಾದಗಿರಿ | KY | - | 03 | 00 | 04 |
| 19 | ಹಾಸನ | LL | - | 01 | 01 | 05 |
| 20 | ಚಿಕ್ಕಬಳ್ಳಾಪುರ | MC | - | 04 | 02 | 01 |
| 21 | ಕೋಲಾರ | MM | - | 02 | 00 | 04 |
| 22 | ಚಾಮರಾಜನಗರ | NC | - | 04 | 00 | 00 |
| 23 | ಮೈಸೂರು | NN | - | 06 | 05 | 08 |
| 24 | ಮಂಡ್ಯ | PP | - | 02 | 01 | 02 |
| 25 | ಉತ್ತರ ಕನ್ನಡ | QQ | - | - | 01 | 03 |
| 26 | ಕೊಪ್ಪಳ | RK | 03 | 06 | 01 | 01 |
| 27 | ರಾಯಚೂರು | RR | - | 05 | 02 | 04 |
| 28 | ದಕ್ಷಿಣ ಕನ್ನಡ | SS | - | 01 | 02 | 06 |
| 29 | ಉಡುಪಿ | SU | - | - | 02 | 02 |
| 30 | ಶಿವಮೊಗ್ಗ | TT | - | - | 03 | 04 |
| 31 | ತುಮಕೂರು | UU | - | 01 | 02 | 05 |
| 32 | ಕೊಡಗು | VV | - | - | 00 | 01 |
| TOTAL | | | 03 | 77 | 102 | 157 |